೧೭

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4(64)

ಸದಸ್ಯರ ಹೆಸರು : ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 27.01.2026

ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಹಾನಗರ ಪಾಲಿಕೆಗಳು ನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಪ್ರಸ್ತುತ ಒಟ್ಟು ಎಷ್ಟು ಸಂಖ್ಯೆಯ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ; | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಖಾಯಂ/ನೇರಪಾವತಿ/ ದಿನಗೂಲಿ ಸೇರಿ 8380 ಹಾಗೂ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ 10,368 ಒಟ್ಟು 18,748 ಜನ ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. |
| ಆ) | ಸದರಿ ಪೌರಕಾರ್ಮಿಕರಲ್ಲಿ ಖಾಯಂ (Permanent) ಮತ್ತು ಗುತ್ತಿಗೆ/ಹೊರಗುತ್ತಿಗೆ (Contract/Outsourced) ಆಧಾರದ ನೌಕರರ ಸಂಖ್ಯೆ ಎಷ್ಟು; ಹಾಗೂ ಈ ಎರಡೂ ವರ್ಗದ ನೌಕರರಿಗೆ ಪ್ರಸ್ತುತ ಪಾವತಿಸಲಾಗುತ್ತಿರುವ ಮಾಸಿಕ ವೇತನ ಮತ್ತು ಇತರೆ ಭತ್ಯೆಗಳೇನು; | ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016,ದಿನಾಂಕ: 07.08.2017 ರೀತ್ಯಾ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಲಾಗಿದ್ದು, ಹಾಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಅಗತ್ಯಕ್ಕೆ ಅನುಗುಣವಾಗಿ, ನೇರಪಾವತಿ ಮೂಲಕ ಕೆಲಸಕ್ಕೆ ತೆಗೆದುಕೊಂಡು ನಗರಸ್ಥಳೀಯ ಸಂಸ್ಥೆಗಳಿಂದ ಸಂಭಾವನೆಯನ್ನು ನೀಡಲು ಆದೇಶಿಸಲಾಗಿರುತ್ತದೆ. ಅದರಂತೆ ಪ್ರಸ್ತುತ ನಗರಸ್ಥಳೀಯ ಸಂಸ್ಥೆಗಳಲ್ಲಿ ಖಾಯಂ/ನೇರಪಾವತಿ/ ದಿನಗೂಲಿ/ ಕ್ಷೇಮಾಭಿವೃದ್ಧಿ ಯಡಿಯಲ್ಲಿ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದು, ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ.<br><br>ರಾಜ್ಯದ ಮಹಾನಗರ ಪಾಲಿಕೆ (ಜಿ.ಬಿ.ಎ. ಹೊರತುಪಡಿಸಿ), ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿಗಳಲ್ಲಿ ಖಾಯಂ (Permanent) 12790 ಹಾಗೂ ನೇರಪಾವತಿ/ದಿನಗೂಲಿಯಡಿ 5958 ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>ಖಾಯಂ ಪೌರಸೇವಾ ನೌಕರರಿಗೆ ಸರ್ಕಾರದ ಆದೇಶಾನುಸಾರ ಕಾಲಕಾಲಕ್ಕನುಗುಣವಾಗಿ ಹಾಗೂ ವೇತನ ಆಯೋಗದ ಆದೇಶದಂತೆ ಬದಲಾಗುವ ವೇತನದಂತೆಯೇ ಖಾಯಂ ಪೌರಕಾರ್ಮಿಕರಿಗೂ ಸಹ ವೇತನ ಪಾವತಿಸಲಾಗುತ್ತಿದೆ. ವಿವರ ಕೆಳಗಿನಂತಿದೆ. |

**ಖಾಯಂ ಪೌರಕಾರ್ಮಿಕರಿಗೆ ನೀಡಲಾಗುತ್ತಿರುವ ಮಾಸಿಕ ವೇತನ ಮತ್ತು ಭತ್ಯೆಯ ವಿವರ**

| | |
|---|---|
| ಮೂಲವೇತನ | 27000 |
| ತುಟ್ಟಿಭತ್ಯೆ | 3848 |
| ಮನೆ ಬಾಡಿಗೆ | 4050 |
| ವೈದ್ಯಕೀಯ ಭತ್ಯೆ | 500 |
| ಸಮವಸ್ತ್ರ ಭತ್ಯೆ | 300 |
| ನಗರ ಭತ್ಯೆ | 600 |
| **ಒಟ್ಟು** | **36298** |

ನೇರ ಪಾವತಿ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ಕಾಲ ಕಾಲಕ್ಕೆ ನಿಗಧಿಪಡಿಸುವ ಕನಿಷ್ಠ ವೇತನದಂತೆ ವೇತನವನ್ನು ನೀಡಲಾಗುತ್ತಿದ್ದು, ನೇರ ಪಾವತಿ ಪೌರಕಾರ್ಮಿಕರಿಗೆ ನೀಡಲಾಗುತ್ತಿರುವ ಮಾಸಿಕ ವೇತನ ಮತ್ತು ಭತ್ಯೆಯ ವಿವರ ಈ ಕೆಳಗಿನಂತಿದೆ:-

**ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ**

| ಕ್ರ ಸಂ | ವಿವರ | ಮಹಾ ನಗರ ಪಾಲಿಕೆ | ನಗರಸಭೆ ಗ್ರೇಡ್-1 | ನಗರಸಭೆ ಗ್ರೇಡ್-2 & ಪುರಸಭೆ | ಪಟ್ಟಣ ಪಂಚಾಯತಿ |
|---|---|---|---|---|---|
| 1 | ಕನಿಷ್ಟ ವೇತನ ತಿಂಗಳಿಗೆ (A) | 20125 | 19696 | 19267 | 18838 |
| 2 | Employee's Contribution (12% + 0.75%) | 2415 | 2364 | 2312 | 2261 |
| | | 150 | 148 | 145 | 141 |
| 3 | **ಒಟ್ಟು PF+ESI (B)** | **2565** | **2512** | **2457** | **2402** |
| 4 | ಪೌರಕಾರ್ಮಿಕರಿಗೆ ಮಾಹೆಯಾನ ನೀಡಬೇಕಾದ ನಿವ್ವಳ ವೇತನ (ಪಿಎಫ್ & ಇಎಸ್ ಐ – ಕೆಲಸಗಾರರ ವಂತಿಕೆಯನ್ನು ಕಳೆದು (A-B) | 17560 | 17184 | 16810 | 16436 |
| | **Round off** | **17560** | **17184** | **16810** | **16436** |
| 5 | Employer's Contribution 13% EST 3.25% | 2233 | 2560 | 2505 | 2449 |
| | | 570 | 640 | 626 | 612 |
| | ಒಟ್ಟು (PF+ESI) (C) 3.25% | 2803 | 3200 | 3131 | 3061 |
| | ಒಟ್ಟು (PF+ESI) (A+C) | 20363 | 22896 | 22398 | 21899 |
| | **Round off to next ten** | **20363** | **22896** | **22398** | **21899** |

| | | |
|---|---|---|
| ಇ) | ನಗರ ಸ್ಥಳೀಯ ಸಂಸ್ಥೆಗಳಲ್ಲಿ ದೀರ್ಘಕಾಲದಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ | **ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಪೌರಕಾರ್ಮಿಕರ ನೇಮಕಾತಿ ವಿವರ:** ಸರ್ಕಾರದ ಆದೇಶ ಸಂಖ್ಯೆ ನಅಇ 126 ಟಿಎಂಎಸ್ 2016 ದಿನಾಂಕ: 04.12.2017ರ ಹಾಗೂ ಸರ್ಕಾರದ ಆದೇಶ ಸಂಖ್ಯೆ ನಅಇ |

| | | |
|---|---|---|
| | ಪೌರಕಾರ್ಮಿಕರನ್ನು ಹಂತ-ಹಂತವಾಗಿ ಖಾಯಂಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಈ ಯೋಜನೆಯಡಿ ಈವರೆಗೆ ಒಟ್ಟು ಎಷ್ಟು ಜನ ಗುತ್ತಿಗೆ ನೌಕರರನು, ಸರ್ಕಾರ ಖಾಯಂಗೊಳಿಸಿದೆ; | 176 ಜಿಇಎಲ್ 2022(ಭಾ-2)(ಇ) ದಿನಾಂಕ: 23.11.2022ರಲ್ಲಿ ಕರ್ನಾಟಕ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ/ದಿನಗೂಲಿ, ಕ್ಷೇಮಾಭಿವೃದ್ಧಿ ಗುತ್ತಿಗೆ/ಹೊರಗುತ್ತಿಗೆ/ಇತರೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ವಿಶೇಷ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿರುವಂತೆ 2017 ರಲ್ಲಿ 2603 ಮತ್ತು 2022 ರಲ್ಲಿ 4126 ಸೇರಿ ಒಟ್ಟು 6729 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ.<br>ರಾಜ್ಯದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 57 TMS 2024 (ಇ), ದಿನಾಂಕ: 27.09.2024 ರಲ್ಲಿ 1100 ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದನ್ವಯ ನಿರ್ದೇಶನಾಲಯದ ಆದೇಶ ದಿನಾಂಕ:23.10.2024ರಲ್ಲಿ 1100 ಹುದ್ದೆಗಳನ್ನು ಸ್ಥಳೀಯ ಸಂಸ್ಥೆವಾರು ಹಂಚಿಕೆ ಮಾಡಿ ಆಯಾ ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಕಾತಿ ಮಾಡುವ ಸಂಬಂಧ ಅಗತ್ಯ ಕ್ರಮವಹಿಸಲು ಆದೇಶಿಸಲಾಗಿರುತ್ತದೆ.<br><br>ಅದರಂತೆ ಕೋಲಾರ ಜಿಲ್ಲೆ 88 ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ 13 ಒಟ್ಟು 101 ಪೌರಕಾರ್ಮಿಕರನ್ನು ಖಾಯಂಗೊಳಿಸಲಾಗಿರುತ್ತದೆ. ಉಳಿದ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಸರ್ಕಾರದ ಆದೇಶ ಸಂ: ನಅಇ 176 ಜಿಇಎಲ್ 2022 (ಭಾಗ-2), ದಿನಾಂಕ 29.03.2023 ರನ್ವಯ ನಗರಸ್ಥಳೀಯ ಸಂಸ್ಥೆಗಳಿಗೆ 132 ಸಂಖ್ಯಾತಿರಿಕ್ತ ಪೌರಕಾರ್ಮಿಕರ ಹುದ್ದೆಗಳನ್ನು ಸೃಜಿಸಲಾಗಿದ್ದು, ಸದರಿ ಹುದ್ದೆಗಳನ್ನು ಪೌರಾಡಳಿತ ನಿರ್ದೇಶನಾಲಯದ ಆದೇಶ ಸಂ: 1971724/DMA/EST2/GRPD/54/2025, ದಿನಾಂಕ 13.01.2026 ರನ್‌ವಯ ನಗರಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>**ಮಹಾನಗರಪಾಲಿಕೆಗಳಲ್ಲಿನ ಪೌರಕಾರ್ಮಿಕರ ನೇಮಕಾತಿ ವಿವರ:**<br>ಸರ್ಕಾರದ ಆದೇಶ ಸಂಖ್ಯೆ ನಅಇ 129 ಎಂಎನ್ಇ 2017 ದಿನಾಂಕ: 05.12.2017ರ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 171 ಎಂಎನ್ಇ 2022(ಇ) ದಿನಾಂಕ:23.11.2022 ರಲ್ಲಿ ಹಾಗೂ ಸರ್ಕಾರದ ಪತ್ರ ಸಂಖ್ಯೆ: ನಅಇ 171 ಎಂಎನ್ಇ 2022(ಇ) ದಿನಾಂಕ:09.03.2023 ಮತ್ತು ಸರ್ಕಾರದ ತಿದ್ದುಪಡಿ ಆದೇಶ ಸಮ ಸಂಖ್ಯೆ ದಿನಾಂಕ:02.11.2023 ರಲ್ಲಿ ಕರ್ನಾಟಕ ಮಹಾನಗರಪಾಲಿಕೆಗಳಲ್ಲಿ ನೇರಪಾವತಿ/ದಿನಗೂಲಿ, ಕ್ಷೇಮಾಭಿವೃದ್ಧಿ ಗುತ್ತಿಗೆ/ಹೊರಗುತ್ತಿಗೆ/ಇತರೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ವಿಶೇಷ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿರುವಂತೆ 2017 ರಲ್ಲಿ 782 ಮತ್ತು 2022 ರಲ್ಲಿ 931 & 2023 ರಲ್ಲಿ 619 ಸೇರಿ ಒಟ್ಟು 2332 ಪೌರಕಾರ್ಮಿಕರುಗಳನ್ನು ಖಾಯಂ ಮಾಡಿಕೊಳ್ಳಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 57 ಟಿಎಂಎಸ್ 2024 (ಇ) |

| | | |
|---|---|---|
| | | ದಿನಾಂಕ:27.09.2024ರನ್ವಯ ಮಹಾನಗರಪಾಲಿಕೆಗಳಿಗೆ ಒಟ್ಟು327 ಪೌರಕಾರ್ಮಿಕರನ್ನು ಖಾಯಂ ಮಾಡಲು ಅನುಮತಿ ನೀಡಿರುವಂತೆ ಪೌರಾಡಳಿತ ನಿರ್ದೇಶನಾಲಯದ ಆದೇಶ ಸಂ: 1572124 DMA EST 3 GRPD 05 2024, ದಿನಾಂಕ 13.01.2026 ರಂದು ಒಟ್ಟು 12 ಮಹಾನಗರಪಾಲಿಕೆಗಳಿಗೆ 327 ಪೌರಕಾರ್ಮಿಕರ ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ. |
| ಈ) | ರಾಜ್ಯದ ಪಾಲಿಕೆ ಮತ್ತು ಪಂಚಾಯಿತಿ ವ್ಯಾಪ್ತಿಗಳಲ್ಲಿ ಒಳಚರಂಡಿ (UGD) ಸ್ವಚ್ಛಗೊಳಿಸಲು ಪ್ರತ್ಯೇಕ ನೌಕರರನ್ನು ನಿಯೋಜಿಸಲಾಗಿದೆಯೇ, ಹಾಗಿದ್ದಲ್ಲಿ, ಈ ವಿಭಾಗದಲ್ಲಿ ಖಾಯಂ ಮತ್ತು ಗುತ್ತಿಗೆ ಆಧರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಮಹಾನಗರ ಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾಗಿರುವ ಒಳಚರಂಡಿ (UGD) ಸಿಬ್ಬಂದಿಗಳನ್ನು ಒಳಚರಂಡಿ ನಿರ್ವಹಣೆಗೆ ನಿಯೋಜಿಸಲಾಗಿರುತ್ತದೆ. ರಾಜ್ಯದ 13 ಮಹಾನಗರ ಪಾಲಿಕೆಗಳಲ್ಲಿ ಖಾಯಂ ಹುದ್ದೆಯಲ್ಲಿ 20 ಮಂದಿ ಮತ್ತು ಹೊರಗುತ್ತಿಗೆಯಡಿ 664 ಮಂದಿ ಕಾರ್ಯ ನಿರ್ವಹಿಸುತ್ತಿದ್ದು, ಪಾಲಿಕೆವಾರು ವಿವರಗಳನ್ನು ಅನುಬಂಧ-01ರಲ್ಲಿ ಲಗತ್ತಿಸಿದೆ.<br><br>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಒಳಚರಂಡಿ (UGD) ಸಹಾಯಕರ ಹುದ್ದೆಗಳು ಮಂಜೂರಾಗಿರುವುದಿಲ್ಲ. ಖಾಯಂ ಹುದ್ದೆಗಳಲ್ಲಿ ಯಾವುದೇ ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದಿಲ್ಲ ಹಾಗೂ ಹೊರಗುತ್ತಿಗೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿವರಗಳನ್ನು ಅನುಬಂಧ-02 ಲಗತ್ತಿಸಿದೆ. |
| ಉ) | ವಿಶೇಷವಾಗಿ ಅತ್ಯಂತ ಅಪಾಯಕಾರಿ ಸನ್ನಿವೇಶದಲ್ಲಿ ಕೆಲಸ ಮಾಡುವ ಒಳಚರಂಡಿ (UGD) ಸ್ವಚ್ಛಗೊಳಿಸುವ ನೌಕರರನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಅವರನ್ನು ಖಾಯಂಗೊಳಿಸುವ ಅಥವಾ ಅವರಿಗೆ ಹೆಚ್ಚಿನ ಸೇವಾ ಭದ್ರತೆ ನೀಡುವ ಯಾವುದಾದರೂ ವಿಶೇಷ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಳಚರಂಡಿ 592 (UGD) ಸಿಬ್ಬಂದಿಗಳನ್ನುಆರ್ಥಿಕಇಲಾಖೆಯಆದೇಶದಸಂಖ್ಯೆ:188 ವೆಚ್ಚ:09: 2023 ದಿನಾಂಕ:09.02.2024 ರನ್ವಯ ನೇರ ನೇಮಕಾತಿಯಡಿ ಭರ್ತಿ ಮಾಡಲು ಆದೇಶಿಸಲಾಗಿರುತ್ತದೆ. ಅದರಂತೆ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.<br><br>ಅಲ್ಲದೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ UGD ಸಹಾಯಕರಿಗೆ ಸೇವಾ ಭದ್ರತೆ ಒದಗಿಸುವ ಉದ್ದೇಶದಿಂದ ಘನತ್ಯಾಜ್ಯ ನಿರ್ವಹಣೆಯಡಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ನೇರ ಪಾವತಿಗೊಳಿಸಲು ಕಡತ ಸಂಖ್ಯೆ: 1799464 ಏಕ ಕಡತದಲ್ಲಿ ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. |

ಇ-ಸಂಖ್ಯೆ: ನಅಇ 16 ಜಿಇಎಲ್ 2026 (ಇ)

**( ರಹೀಂ ಖಾನ್ )**
ಪೌರಾಡಳಿತ ಮತ್ತು ಹಜ್ ಸಚಿವರು

| ಅನುಬಂಧ-1 | | |
|---|---|---|
| ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಯುಜಿಡಿ ಸಹಾಯಕರ ವಿವರ | | |
| ಕ್ರ.ಸ | ಪಾಲಿಕೆಯ ಹೆಸರು | UGD ಸಿಬ್ಬಂದಿಯ ಸಂಖ್ಯೆ |
| 1 | ಮೈಸೂರು | 231 |
| 2 | ಹುಬ್ಬಳಿ-ಧಾರವಾಡ | 58 |
| 3 | ಮಂಗಳೂರು | 67 |
| 4 | ಶಿವಮೊಗ್ಗ | 35 |
| 5 | ತುಮಕೂರು | 51 |
| 6 | ದಾವಣಗೆರೆ | 50 |
| 7 | ಕಲಬುರಗಿ | 0 |
| 8 | ಬೆಳಗಾವಿ | 49 |
| 9 | ಬಳ್ಳಾರಿ | 44 |
| 10 | ವಿಜಯಪುರ | 79 |
| 11 | ಹಾಸನ | 0 |
| 12 | ರಾಯಚೂರು | 0 |
| 13 | ಬೀದರ್ | 0 |
| ಒಟ್ಟು | | **664** |

## ಅನುಬಂಧ-2

### ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಯುಜಿಡಿ ಸಹಾಯಕರ ವಿವರ

| ಕ್ರ.ಸಂ. | ಜಿಲ್ಲೆಗಳ ಹೆಸರು | ಹೊರಗುತ್ತಿಗೆ ನೌಕರರ ಸಂಖ್ಯೆ |
|---|---|---|
| 1 | ಚಾಮರಾಜನಗರ | 0 |
| 2 | ಕೊಡಗು | 0 |
| 3 | ಬೆಂಗಳೂರು ನಗರ | 22 |
| 4 | ಬೆಂಗಳೂರು ಗ್ರಾಮಾಂತರ | 15 |
| 5 | ಬಳ್ಳಾರಿ | 0 |
| 6 | ದಾವಣಗೆರೆ | 19 |
| 7 | ತುಮಕೂರು | 12 |
| 8 | ರಾಯಚೂರು | 0 |
| 9 | ಹಾವೇರಿ | 5 |
| 10 | ಮೈಸೂರು | 3 |
| 11 | ಮಂಡ್ಯ | 0 |
| 12 | ವಿಜಯನಗರ | 0 |
| 13 | ವಿಜಯಪುರ | 8 |
| 14 | ಚಿಕ್ಕಮಗಳೂರು | 4 |
| 15 | ಉಡುಪಿ | 17 |
| 16 | ಧಾರವಾಡ | 0 |
| 17 | ಉತ್ತರ ಕನ್ನಡ | 19 |
| 18 | ಕೊಪ್ಪಳ | 20 |
| 19 | ಚಿಕ್ಕಬಳ್ಳಾಪುರ | 9 |
| 20 | ಗದಗ | 0 |
| 21 | ಬಾಗಲಕೋಟೆ | 3 |
| 22 | ಶಿವಮೊಗ್ಗ | 0 |
| 23 | ಬೆಂಗಳೂರು ದಕ್ಷಿಣ | 28 |
| 24 | ಕಲಬುರಗಿ | 4 |
| 25 | ಚಿತ್ರದುರ್ಗ | 8 |
| 26 | ಬೆಳಗಾವಿ | 4 |
| 27 | ಬೀದರ್ | 1 |
| 28 | ಹಾಸನ | 4 |
| 29 | ಕೋಲಾರ | 21 |
| 30 | ದಕ್ಷಿಣ ಕನ್ನಡ | 0 |
| 31 | ಯಾದಗಿರಿ | 0 |
| | ಒಟ್ಟು | 226 |